ಉದಯವಾಣಿ
ಜನಮನದ ಜೀವನಾಡಿ

# ಸೈಬರ್ ಸುರಕ್ಷತೆ ಅರಿವು ಕಾರ್ಯಾಗಾರ




**ಸಂಕೇಶ್ವರ: ಪಟ್ಟಣದಲ್ಲಿ ಸೈಬರ್ ಸುರಕ್ಷತೆ ಅರಿವು ಕಾರ್ಯಾಗಾರ ನಡೆಯಿತು.**

■ **ಉದಯವಾಣಿ ಸಮಾಚಾರ**

**ಸಂಕೇಶ್ವರ:** ಪಟ್ಟಣದ ದನಗಳ ಸಂತೆಯಲ್ಲಿ ಪುಣೆ ಮೂಲದ ಕ್ವಿಕ್ ಹೀಲ್ ಫೌಂಡೇಶನ್ ಮತ್ತು ನಿಡಸೋಸಿಯ ಎಸ್‌ಜೆಪಿಎನ್ ಟ್ರಸ್ಟ್‌ನ ಬಿಸಿಎ ಮಹಾವಿದ್ಯಾಲಯದ ಆಶ್ರಯದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಸೈಬರ್ ಸುರಕ್ಷತೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಕಾರ್ಯಾಗಾರ ಆಯೋಜಿಸಲಾಗಿತ್ತು.

ವಿದ್ಯಾರ್ಥಿನಿ ಸಂಪದ ಶೇಂಡೆ ಮಾತನಾಡಿ, ಡಿಜಿಟಲ್ ಯುಗದಲ್ಲಿ ಸೈಬರ್ ಅಪಾಯಗಳು ಎದುರಾಗುತ್ತಿವೆ. ಗ್ರಾಮೀಣ ಪ್ರದೇಶದ ಜನತೆ ಹೆಚ್ಚಿನ ಹೊಣೆಗಾರಿಕೆ ಇಲ್ಲದೆ ಸ್ಮಾರ್ಟ್‌ಫೋನ್ ಬಳಸುತ್ತಿದ್ದಾರೆ. ಆದ್ದರಿಂದ ಅವರಲ್ಲೂ ಸೈಬರ್ ಜಾಗೃತಿ ಮೂಡಿಸುವುದು ಇಂದಿನ ಅಗತ್ಯ ಎಂದರು.

ಕಾರ್ಯಾಗಾರದಲ್ಲಿ ಸೈಬರ್ ವಂಚನೆಗಳು, ಫಿಷಿಂಗ್, ಒಟಿಪಿ ಕಪಾಟು, ಪಾಸ್‌ವರ್ಡ್ ಸುರಕ್ಷತೆ, ಡಿಜಿಟಲ್ ಪಾವತಿ ವೇಳೆ ಎಚ್ಚರಿಕೆ ಮುಂತಾದ ವಿಷಯಗಳ ಕುರಿತು ಮಾಹಿತಿ ನೀಡಲಾಯಿತು. ಅಲ್ಲದೇ, ಪೋಸ್ಟರ್ ಪ್ರದರ್ಶನ, ಕಿರು ನಾಟಕ, ಸಾರ್ವಜನಿಕರ ಪ್ರಶ್ನೋತ್ತರದ ಮೂಲಕ ಹಲವು ವಿಷಯಗಳ ಚರ್ಚೆ ನಡೆಯಿತು.

ಕಾಲೇಜು ಪ್ರಾಚಾರ್ಯ ಬಸವರಾಜ ಹಾಲಭಾವಿ, ಪೊಲೀಸ್ ಇಲಾಖೆಯ ರವಿ ಹುಚ್ಚರೆಡ್ಡಿ, ಆನಂದ ಸೋನಾರ್ ಹಾಗೂ ಮಹಾಂತೇಶ ಪಾಟೀಲ ವಿದ್ಯಾರ್ಥಿಗಳ ಉಪಕ್ರಮಕ್ಕೆ ಸಂತೋಷ ವ್ಯಕ್ತಪಡಿಸಿದರು.